'ನಿಜಾನಾ? ಇವಳೇ ಮಾಡಿದ್ದಳಾ? ನನ್ನ ಮೇಲಿನ ಪ್ರೀತಿ ಎಲ್ಲ ನನ್ನ ಭ್ರಮೆಯಾ?'

'ರಾಕೇಶ್ ನಂಬಬೇಡಾ... ನಾನು ಹಾಗೆ ಮಾಡಿಲ್ಲ... ಹಾಗೇನಾದರೂ ಆಗಿದ್ದರೆ ಕೃಷ್ಣನ್ ಯಾಕೆ ಐದು ಕೋಟಿ ನಿನಗೆ ಕೊಡುತ್ತಿದ್ದರು?'

'ರಾಕೇಶ್ ನಿಮ್ಮ ಫೋನ್ ಕೊಡಿ' ಎಂದ ಇನ್‌ಸ್ಪೆಕ್ಟರ್ ನಾಗೇಶ್.

'ನಿಮಗೆ ಕೃಷ್ಣನ್ ಅವರು ಐದು ಕೋಟಿ ಕೊಟ್ಟರು ಅಂತ ಹೇಳಿದಿರಲ್ಲ, ಆ ಮಾಹಿತಿ ನಿಮಗೆ ಬ್ಯಾಂಕ್‌ನಿಂದ ಬಂತಲ್ಲ, ಆ ಮೆಸೇಜ್ ತೋರಿಸಿ... ನಿಮ್ಮ ಅಕೌಂಟ್ ಈ ಬ್ಯಾಂಕ್‌ನ ಯಾವ ಬ್ರಾಂಚ್‌ನಲ್ಲಿ ಇದೆ ಅಂತಾ ಹೇಳಿ.'

ರಾಕೇಶ್‌ಗೆ ಏನೂ ಅರ್ಥ ಆಗಲಿಲ್ಲ. ಅವಳೆಡೆ ನೋಡಿದ. ಅವಳು ತಲೆ ಆಡಿಸಿದಳು, ತೋರಿಸೆಂದು.

ನಾಗೇಶ್ ಕಾನ್‌ಸ್ಟೆಬಲ್ ಕರೆದು, 'ಈ ಬ್ಯಾಂಕ್‌ಗೆ ಫೋನ್ ಮಾಡಿ ರಾಕೇಶ್ ಅವರ

